**O. S. No:279/2021**
**PW:1**

(ಇಂದು ದಿನಾಂಕಃ **16-04-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ಶ್ರೀ ಆರ್ ಎಂ ಆರ್ ವಕೀಲರಿಂದಃ**

1 ನೇ ಪ್ರತಿವಾದಿ ನನ್ನ ತಂದೆ. 6 ನೇ ಪ್ರತಿವಾದಿ ನನ್ನ ತಾಯಿ. 7 ನೇ ಪ್ರತಿವಾದಿ ನನ್ನ ಸಹೋದರ. ಜಮೀನು ಸರ್ವೆ ನಂಃ 141/2 ಹಾಗೂ 457/2 ಮುಂಚೆ ನನ್ನ ತಂದೆಯ ಹೆಸರಿನಲ್ಲಿದ್ದವು ಎಂದರೆ ಸರಿ. ನನ್ನ ತಂದೆ ಸದರಿ 2 ಜಮೀನುಗಳಿಗೆ ಸಂಬಂಧಿಸಿ ದಿನಾಂಕಃ 04-06-2015 ರಂದು 8 ನೇ ಪ್ರತಿವಾದಿಯ ಹೆಸರಿನಲ್ಲಿ ರೂ. 8,75,000/- ಗಳಿಗೆ ಖರೀದಿ ಕರಾರು ಪತ್ರ ಮಾಡಿ ರೂ. 7,25,000/- ಗಳನ್ನು ಮುಂಗಡ ಹಣವಾಗಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆ ಅಣ್ಣಿಗೇರಿ ಕಚೇರಿಯಲ್ಲಿ ನೋಂದಣಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹಾಗೂ 8 ನೇ ಪ್ರತಿವಾದಿ ರಾಜೀ ಮಾಡಿಕೊಂಡು ಸದರಿ ಖರೀದಿ ಕರಾರು ಪತ್ರವನ್ನು ದಿನಾಂಕಃ 04-08-2017 ರಂದು ರದ್ದು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಯನ್ನು ರದ್ದು ಪಡಿಸುವ ವೇಳೆ ನನ್ನ ತಂದೆ 8 ನೇ ಪ್ರತಿವಾದಿಗೆ ಮುಂಗಡ ಹಣವಾದ ರೂ. 7,25,000/- ಗಳನ್ನು ಮರಳಿ ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ನಂತರ ಜಮೀನು ಸರ್ವೆ ನಂಃ 141/2 ಕ್ಷೇತ್ರ 4 ಎಕರೆ 26 ಗುಂಟೆಗೆ ಸಂಬಂಧಿಸಿ ನನ್ನ ತಂದೆ ರೂ. 6,98,000/- ಗಳಿಗೆ ಒಬ್ಬ ಪ್ರವೀಣ ಚಂದ್ರಶೇಖರ ಹುಣಸಿಕಟ್ಟಿ ರವರಿಗೆ ನೋಂದಾಯಿತ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ 6 ಮತ್ತು 7 ನೇ ಪ್ರತಿವಾದಿಯರು ಸಹಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೊಲದ ಮೇಲಿನ ಭೋಜ ತೆಗೆಸುವುದಾಗಿ ತಿಳಿಸಿ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿಯ ಪ್ರಕಾರ ಈಗ ಸದರಿ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸರಿ.

3. ನಂತರ 2 ನೇ ಪ್ರತಿವಾದಿ ಜಮೀನು ಸರ್ವೆ ನಂಃ 141/2 ನ್ನು ರೂ. 10,50,000/- ಗಳಿಗೆ 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ 5 ನೇ ಪ್ರತಿವಾದಿಗೆ ನೋಂದಾಯಿತ ದಾಖಲೆಯ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿಯ ಪ್ರಕಾರ 3 ಮತ್ತು 4 ನೇ ಪ್ರತಿವಾದಿಯರ ಹೆಸರು ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ದಾಖಲಾಗಿದೆ ಎಂದರೆ ಸರಿ. 8 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರನ್ನು ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಲಾಗಿದೆ ಎಂದರೆ ಸರಿಯಲ್ಲ. 3 ಮತ್ತು 4 ನೇ ಪ್ರತಿವಾದಿಯರಿಗೆ

ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿ ಪರ ಶ್ರೀ ಎಚ್ ಡಿ ಜಿ ವಕೀಲರಿಂದಃ**

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಜಮೀನು ಸರ್ವೇ ನಂಃ 457/2 ಈಗ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಅದು ನನ್ನ ತಾಯಿಯ ಹೆಸರಿನಲ್ಲಿದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಸದರಿ ಜಮೀನನ್ನು ನನ್ನ ತಂದೆ ನನ್ನ ತಾಯಿಗೆ ಬಿಟ್ಟುಕೊಟ್ಟಿರುತ್ತಾರೆ. ನನ್ನ ತಂದೆ ದಾವೆ ಚಾಲ್ತಿಯಲ್ಲಿದ್ದಾಗ ಸದರಿ ಜಮೀನನ್ನು ನನ್ನ ತಾಯಿಗೆ ಬಿಟ್ಟುಕೊಟ್ಟಿರುತ್ತಾರೆ. ಸಾಕ್ಷಿಯು ಸದರಿ ಹಕ್ಕು ಬದಲಾವಣೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸದರಿ ವಿಷಯ ನನಗೆ ನನ್ನ ತಂದೆ ನನ್ನ ತಾಯಿಗೆ ಬಿಟ್ಟುಕೊಡುವಾಗ ಗೊತ್ತಾಗಿರುತ್ತದೆ. ನಾನು ಸದರಿ ವರ್ಗಾವಣೆಗೆ ತಕರಾರು ಮಾಡಿರುವುದಿಲ್ಲ. ಸದರಿ ಅಂಶವನ್ನು ನನ್ನ ವಾದ ಪತ್ರದಲ್ಲಿ ತೋರಿಸಿಲ್ಲ. ದಾವಾ ಆಸ್ತಿ ಸರ್ವೇ ನಂಃ 141/2 ಹಾಗೂ 3 ರಿಂದ 5 ನೇ ಪ್ರತಿವಾದಿಯರ ವಿರುದ್ಧ ದಾವೆ ಸಲ್ಲಿಸಲು ದಾವಾ ಕಾರಣ ಉಂಟಾಗಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನನಗಾಗಲೀ ಅಥವಾ ನನ್ನ ತಂದೆ, ತಾಯಿ ಹಾಗೂ ಸಹೋದರರಿಗೆ ಯಾವುದೇ ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ. **(ಉಳಿದಂತೆ 2 ಮತ್ತು 8 ಪ್ರತಿವಾದಿಯರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.)**

**ಪಾಟೀ ಸವಾಲುಃ 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಎಸ್ ಎ ಪಿ ವಕೀಲರಿಂದಃ**

ಪ್ರತಿವಾದ ಪತ್ರ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**